ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಗಿರಿಜನ ಹಾಡಿಜನರಿಗೆ ಪುನರ್ವಸತಿ

367(504) ಶ್ರೀ ಬಸವರಾಜ್. ಹೆಚ್.ಸಿ (ಪಿರಿಯಾಪಟ್ಟಣ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಮಲಗನಕೆರೆ ಗಿರಿಜನ ಹಾಡಿಯ ಗಿರಿಜನರಿಗೆ ಹೊಸದಾಗಿ ಜಮೀನು ಹಾಗೂ ಮನೆಗಳನ್ನು ನಿರ್ಮಿಸಿಕೊಡಲು ಕ್ಷೇತ್ರದ ದೊಡ್ಡ ಬೇಲಾಳು ಗ್ರಾಮದ ಬಳಿ 100 ಎಕರೆ ಜಮೀನು ಖರೀದಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ?

ಆ. ಮಂಜೂರಾಗಿ ಆಗಿದ್ದಲ್ಲಿ ಗಿರಿಜನರಿಗೆ ಪುನರ್ವಸತಿ ಕಲ್ಪಿಸಿಕೊಡುವುದು ಯಾವಾಗ?

ಇ. ಎಷ್ಟು ಅವಧಿಯಲ್ಲಿ ಅವರಿಗೆ ಜಮೀನುಗಳನ್ನು ಮಂಜೂರಾತಿ ಮಾಡಲಾಗಿರುವುದು.

ಈ. ಎಷ್ಟು ಫಲಾನುಭವಗಳನ್ನು ಗುರುತಿಸಲಾಗಿದೆ.?

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ, ಆ ಮತ್ತು ಇ

ಜಿಲ್ಲಾಧಿಕಾರಿ,ಮೈಸೂರು ಇವರಿಂದ ದಿನಾಂಕ 18-2-2003 ರಂದು ಜಮೀನಿನ ಮೌಲ್ಯವು ಸೇರಿದಂತೆ ಕೆಲವು ಸ್ಪಷ್ಟೀಕರಣ ಕೋರಲಾಗಿದೆ. ಅದನ್ನು ಪಡೆದು ನಂತರ ನಿಯಮಗಳ ಪ್ರಕಾರ ಪರಿಶೀಲಿಸಲಾಗುವುದು.

ಈ. 43 ಫಲಾನುಭವಿಗಳನ್ನು ಗುರುತಿಸಲಾಗಿದೆ.

ಪಶು ತಳಿಯ ಅಭಿವೃದ್ಧಿಗಾಗಿ ಯೋಜನೆಗಳು

368 (466) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕ ರಾಜ್ಯದಲ್ಲಿ ಪಶುಸಂಗೋಪನೆಯ ಮಹಾ ವಿದ್ಯಾಲಯಗಳ ಅಗತ್ಯತೆ ಇರುವುದು ಸರ್ಕಾರ ಗಮನಿಸಿದೆಯೇ?

ಆ. ರಾಜ್ಯದಲ್ಲಿ ಪಶು ತಳಿಯ ಅಭಿವೃದ್ಧಿಗೆ ಹಾಗೂ ಪಶುಸಂಗೋಪನೆಯ ಬೆಳವಣಿಗೆಗೆ ಅವಕಾಶ ನೀಡುವುದಕ್ಕಾಗಿ ಸರ್ಕಾರವು ಹಾಕಿಕೊಂಡಿರುವ ಯೋಜನೆಗಳೇನು?

ಇ. ರಾಜ್ಯದಲ್ಲಿ ಪಶು ವಿಶ್ವವಿದ್ಯಾಲಯ ಸ್ಥಾಪಿಸಿದರೆ ಪಶುಸಂಗೋಪನೆ ಅಭಿವೃದ್ಧಿಯಾಗಲು ಹಾಗೂ ಯುವಶಕ್ತಿ ಸ್ವಾವಲಂಬಿಯಾಗಲು ಅವಕಾಶವಾಗುವುದೆಂಬುದನ್ನು ಸರ್ಕಾರ ಗುರುತಿಸಿದೆಯೇ?

ಶ್ರೀ ಎಂ. ಮಹದೇವ್(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ. ರಾಜ್ಯದಲ್ಲಿನ ಪಶು ತಳಿಗಳ ಅಭಿವೃದ್ಧಿಗಾಗಿ:-

1. ದೇಶೀಯ ತಳಿಗಳಾದ ಅಮೃತ್‌ಮಹಲ್, ಹಳ್ಳಿಕಾರ್, ಖಿಲಾರ್ ಮತ್ತು ದೇವಣಿ ರಾಸುಗಳ ಅಭಿವೃದ್ಧಿಗಾಗಿ ಸದರಿ ತಳಿಗಳಿಗಾಗಿ ಇಲಾಖೆಯು ಅಭಿವೃದ್ಧಿ ಕ್ಷೇತ್ರಗಳನ್ನು ಚಿಕ್ಕಮಗಳೂರು, ತುಮಕೂರು, ಮತ್ತು ಹಾವೇರಿ ಜಿಲ್ಲೆಗಳಲ್ಲಿ ಹೊಂದಿದ್ದು ಸದರಿ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಹೋರಿ ಕರುಗಳನ್ನು ಉತ್ಪಾದಿಸಿ ರಾಜ್ಯದ ಘನೀಕೃತ ವೀರ್ಯ ಕೇಂದ್ರಗಳ ಮೂಲಕ ಸದರಿ ಹೋರಿಗಳಿಂದ ಉತ್ತಮ ಗುಣಮಟ್ಟದ ಘನೀಕೃತ ವೀರ್ಯವನ್ನು ಉತ್ಪಾದಿಸಿ ಸದರಿ ತಳಿಗಳ